# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1089 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ ( ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | : | 22.12.2021 |
| ಉತ್ತರಿಸುವ ಸಚಿವರು | | ಮಾನ್ಯ ಪಶುಸಂಗೋಪನಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಗೋ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ನಂತರ ಎಷ್ಟು ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ನಿರ್ಮಿಸಲಾಗಿದೆ ; | ರಾಜ್ಯದಲ್ಲಿ ಗೋ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ನಂತರ 30 ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆ ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಆ) | ಸದರಿ ಗೋ ಶಾಲೆಗಳ ಅಂದಾಜು ಮೊತ್ತವೆಷ್ಟು; | 2021-22 ನೇ ಸಾಲಿನಲ್ಲಿ ಪ್ರತಿ ಗೋಶಾಲೆಗೆ ರೂ.50.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. |
| ಇ) | ಗೋ ಶಾಲೆಗಳ ನಿರ್ವಹಣೆಯ ರೂಪುರೇಷೆಗಳೇನು; (ವಿವರ ನೀಡುವುದು) | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆಗಳನ್ನು ಸ್ಥಾಪಿಸಲು ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | ಗೋ ಶಾಲೆಗಳ ನಿರ್ವಹಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; | 30 ಜಿಲ್ಲೆಗಳಲ್ಲಿ ಸರ್ಕಾರಿ ಗೋಶಾಲೆ ಪ್ರಾರಂಭಿಸುವ ಕಾರ್ಯ ಪ್ರಗತಿಯಲ್ಲಿದೆ. |
| ಉ) | ಸದರಿ ಗೋ ಶಾಲೆಗಳಲ್ಲಿ ಇರುವ ಗೋವುಗಳ ಸಂಖ್ಯೆ ಎಷ್ಟು ? | ಸರ್ಕಾರಿ ಗೋಶಾಲೆಗಳು ಇನ್ನು ಕಾರ್ಯಾರಂಭ ಮಾಡಿರುವುದಿಲ್ಲ. |

ಸಂ: ಪಸಂಮೀ ಇ-330 ಸಲೆವಿ 2021

(ಪ್ರಭು. ಬಿ ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ

AHF/ 65 /AHP/2021-AHF_SEC_b_AH_ Animal Husbandry Fisheries sec

ಸರ್ಕಾರದ ಆದೇಶ ಸಂಖ್ಯೆ:ಇ-ಪಸಂಮೀ 65 ಪಪಾಯೋ 2021 ದಿನಾಂಕ:11.08.2021 ಕ್ಕೆ ಅನುಬಂಧ
ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಸ್ಥಾಪಿಸುವ ಸಂಬಂಧ ಮಾರ್ಗಸೂಚಿಗಳು.

1. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದು ಗೋಶಾಲೆಯನ್ನು ಸ್ಥಾಪಿಸುವುದು ಜಿಲ್ಲೆಗಳ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಎಸ್.ಪಿ.ಸಿ.ಎ ಜವಾಬ್ದಾರಿಯಾಗಿರುತ್ತದೆ. ಗೋಶಾಲೆಗಳನ್ನು 2ನೇ ಅಕ್ಟೋಬರ್ 2021 ರೊಳಗಾಗಿ ಸ್ಥಾಪಿಸುವುದು. ಈ ಉದ್ದೇಶಕ್ಕಾಗಿ ಮೊದಲನೆ ಹಾಗೂ ಎರಡನೇ ಕಂತಿನ ಅನುದಾನ ಸೇರಿದಂತೆ ಪ್ರತಿ ಜಿಲ್ಲೆಗೆ ರೂ.24.00 ಲಕ್ಷಗಳನ್ನು ಜಿಲ್ಲೆಗಳ ಜಿಲ್ಲಾಧಿಕಾರಿಯವರಿಗೆ ಬಿಡುಗಡೆಗೊಳಿಸಲಾಗುವುದು. ಹೆಚ್ಚುವರಿ ಅನುದಾನದ ಅವಶ್ಯಕತೆಯಿದ್ದಲ್ಲಿ ಆಯಾ ಜಿಲ್ಲೆಯ ಎಸ್.ಪಿ.ಸಿ.ಎ.ಯು ಈ ಸಂಬಂಧ ಠರಾವು ಪಾಸುಮಾಡಿ ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಇವರಿಗೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಹೆಚ್ಚಿನ ಅನುದಾನವನ್ನು ಜಿಲ್ಲೆಗಳಿಗೆ ಒದಗಿಸಲಾಗುವುದು.
2. ಗೋಶಾಲೆಗಳನ್ನು ಸ್ಥಾಪಿಸುವಾಗ ಬಂಡವಾಳ ವೆಚ್ಚ ಒಳಗೊಂಡಿರುವುದರಿಂದ, ಜಿಲ್ಲಾಧಿಕಾರಿಗಳು ಪ್ರಸ್ತುತ ಜಾರಿಯಲ್ಲಿರುವ ಇತರೆ ಯೋಜನೆಗಳಾದ ಬಯೋಫೆನ್ಸಿಂಗ್ ನಿರ್ಮಾಣ, ವನದ ಕೊಟ್ಟಿಗೆ, ಕೃಷಿ ಹೊಂಡ, ಮೇವು ಉತ್ಪಾದನೆ ಇತ್ಯಾದಿ ಯೋಜನೆಗಳನ್ನು ಒಮ್ಮುಖಗೊಳಿಸುವ ಬಗ್ಗೆ ಜಿಲ್ಲಾ ಪಂಚಾಯಿತಿ ಮತ್ತು ಇತರೆ ಏಜನ್ಸಿಗಳೊಂದಿಗೆ ಸಮಾಲೋಚಿಸತಕ್ಕದ್ದು. ಚಿಕ್ಕ ಮರಗಳು ಮತ್ತು ಪೊದೆಗಳೂ ಸೇರಿದಂತೆ ಮೇವನ್ನು ನಿರಂತರವಾಗಿ ಬೆಳೆಯುವಂತೆ ಯೋಜಿಸುವುದು. ಒಂದುವೇಳೆ, ಯೋಜನೆಗಳನ್ನು ಒಮ್ಮುಖಗೊಳಿಸುವುದರ ಮೂಲಕ ಬಂಡವಾಳ ವೆಚ್ಚವನ್ನು ಭರಿಸಲು ಸಾಧ್ಯವಾಗದಿದ್ದಲ್ಲಿ, ಅಂತಹ ವೆಚ್ಚವನ್ನು ಪ್ರಾರಂಭಿಕ ಕಂತಿನ ಮೊತ್ತ ರೂ.24.00 ಲಕ್ಷಗಳಲ್ಲಿ ಭರಿಸತಕ್ಕದ್ದು.
3. ಹೊಸ ಗೋಶಾಲೆಯನ್ನು ಸ್ಥಾಪಿಸುವುದು ಅಥವಾ ಜಿಲ್ಲೆಗಳಲ್ಲಿ ಯಾವುದೇ ಖಾಸಗಿ ಟ್ರಸ್ಟ್‌ಗಳಿಂದ ನಡೆಯುತ್ತಿರುವ ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ ಯಾವುದೇ ಗೋಶಾಲೆಗಳನ್ನು ವಿಸ್ತರಿಸುವ ಅಥವಾ ಪ್ರೋತ್ಸಾಹಿಸುವ ಬಗ್ಗೆ ತೀರ್ಮಾನವನ್ನು ಎಸ್.ಪಿ.ಸಿ.ಎ ತೆಗೆದುಕೊಳ್ಳಬಹುದು. ಹೊಸ ಗೋಶಾಲೆಯನ್ನು ಎಸ್.ಪಿ.ಸಿ.ಎ ವತಿಯಿಂದ ಸ್ಥಾಪನೆ ಮಾಡಲು ಮೊದಲ ಆದ್ಯತೆಯನ್ನು ನೀಡುವುದು. ಅಪರೂಪದ ಸಂದರ್ಭದಲ್ಲಿ ಅಸ್ತಿತ್ವದಲ್ಲಿರುವ ಗೋಶಾಲೆಯನ್ನು ವಿಸ್ತರಿಸಬಹುದೆಂದು ಎಸ್.ಪಿ.ಸಿ.ಎ ಗೆ ಅನಿಸಿದಲ್ಲಿ, ಆಗ ಎಸ್.ಪಿ.ಸಿ.ಎ.ಯು ಸೂಕ್ತ ಕಾರಣಗಳನ್ನು ನಮೂದಿಸತಕ್ಕದ್ದು ಹಾಗೂ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮುಂದುವರೆಯತಕ್ಕದ್ದು.
4. ಹೊಸ ಗೋಶಾಲೆಯನ್ನಾದರೂ ಸ್ಥಾಪಿಸಲಿ ಅಥವಾ ಅಸ್ತಿತ್ವದಲ್ಲಿರುವ ಗೋಶಾಲೆಯನ್ನಾದರೂ ವಿಸ್ತರಿಸಲಿ, ಜಿಲ್ಲೆಯಲ್ಲಿನ ಒಟ್ಟು ಜಾನುವಾರುಗಳ ಸಂಖ್ಯೆಯಲ್ಲಿ ಕನಿಷ್ಠ ಪಕ್ಷ ಶೇ.0.75 ರಷ್ಟು ಜಾನುವಾರುಗಳಿಗಾದರೂ ಸದರಿ ಗೋಶಾಲೆಗಳಲ್ಲಿ ಸ್ಥಳಾವಕಾಶದ ಲಭ್ಯತೆಯಿದೆಯೇ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಈ ಪ್ರಕಾರವಾಗಿ ಎಸ್.ಪಿ.ಸಿ.ಎ.ಯು ಗೋಶಾಲೆಯ ಗಾತ್ರದ ಬಗ್ಗೆ ಯೋಜನೆಯನ್ನು ರೂಪಿಸತಕ್ಕದ್ದು.
5. ಎಸ್.ಪಿ.ಸಿ.ಎ.ಯು ಸ್ವಯಂಸೇವಕರ ಸಹಾಯದಿಂದ ಗೋಶಾಲೆಗಳನ್ನು ನಡೆಸುವುದು. ಒಂದುವೇಳೆ, ಸ್ವಯಂ ಸೇವಕರು ನಿರಂತರವಾಗಿ ಲಭ್ಯವಿರದಿದ್ದ ಸಂದರ್ಭಗಳಲ್ಲಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಎಸ್.ಪಿ.ಸಿ.ಎ. ಸಭೆಯಲ್ಲಿ ಅನುಮೋದಿಸಿರುವಂತೆ ಎಸ್.ಪಿ.ಸಿ.ಎ.ಯು ಹೊರಗುತ್ತಿಗೆ ಆಧಾರದ ಮೇರೆಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಬಹುದು.

--2

6. ಗೋಶಾಲೆಗಳಿಂದ ಉತ್ಪತ್ತಿಯಾಗುವ ಉಪ ಉತ್ಪನ್ನಗಳನ್ನು ಖಾದಿ ಗ್ರಾಮೋದ್ಯೋಗದ ಮೂಲಕ ಅಥವಾ ಕೆ.ಎಂ.ಎಫ್ ನ ಮೂಲಕ ಅಥವಾ ಕೆ.ಎ.ಪಿ.ಎಲ್ ನಿಂದ (ಗೋಶಾಲೆಯಿಂದ ಉತ್ಪತ್ತಿಯಾಗುವ ಉತ್ಪನ್ನಗಳನ್ನು ಬಳಸಿಕೊಂಡು ಔಷಧಿಗಳನ್ನು ತಯಾರು ಮಾಡುವ) ಮಾರಾಟ ಮಾಡುವುದರ ಮೂಲಕ ಗೋಶಾಲೆಗಳ ಸುಸ್ಥಿರತೆಗಾಗಿ ಸಂಪನ್ಮೂಲಗಳ ಕ್ರೋಢೀಕರಣವನ್ನು ಮಾಡಲು ಎಸ್.ಪಿ.ಸಿ.ಎ.ಯು ಕ್ರಮವಹಿಸತಕ್ಕದ್ದು. ಗೋಶಾಲೆಗಳ ಸುಸ್ಥಿರತೆ/ನಿರ್ವಹಣೆಗಾಗಿ ಮೇವು ಬೆಳೆಯುವುದು ಮತ್ತು ಉಪ-ಉತ್ಪನ್ನಗಳನ್ನು ಮಾರಾಟ ಮಾಡುವುದು ಇತ್ಯಾದಿ ಅಗತ್ಯವಿರುವ ಕ್ರಮಗಳನ್ನು ಎಸ್.ಪಿ.ಸಿ.ಎ. ಯು ತೆಗೆದುಕೊಳ್ಳತಕ್ಕದ್ದು.
7. ಒಂದುವೇಳೆ ಯಾವುದೇ ಸಾರ್ವಜನಿಕರು ಸ್ವಪ್ರೇರಣೆಯಿಂದ ಜಾನುವಾರುಗಳನ್ನು ಅವರುಗಳ ಜಮೀನು ಅಥವಾ ಮನೆಗಳಲ್ಲಿ ನೋಡಿಕೊಳ್ಳಲು ಮುಂದೆ ಬಂದರೆ, ಅಂತಹವರ ಸದುದ್ದೇಶವನ್ನು ಗುರುತಿಸಿ ಖಚಿತಪಡಿಸಿಕೊಂಡ ನಂತರ ಎಸ್.ಪಿ.ಸಿ.ಎ. ಯು ಇದಕ್ಕೆ ಅವಕಾಶ ನೀಡಬಹುದು.
8. ಗೋಶಾಲೆಗಳಲ್ಲಿ ಸಿಸಿಟಿವಿ ಸೌಲಭ್ಯವನ್ನು ಕಲ್ಪಿಸಿರುವುದರ ಬಗ್ಗೆ ಹಾಗೂ 2ನೇ ಅಕ್ಟೋಬರ್ 2021 ರಿಂದ ಇಲಾಖೆ ವತಿಯಿಂದ ಪ್ರಸಾರವಾಗುವ ವೆಬ್‌ಲಿಂಕ್ ನಲ್ಲಿ ಗೋಶಾಲೆಗಳ ಬಗ್ಗೆ ದೈನಂದಿನ ವರದಿ ಮತ್ತು ಕನಿಷ್ಠಪಕ್ಷ ಚಿತ್ರಗಳನ್ನಾದರೂ ನೇರವಾಗಿ ಅಪ್ಲೋಡ್ ಮಾಡಿರುವುದರ ಕುರಿತು ಎಸ್.ಪಿ.ಸಿ.ಎ.ಯು ಖಚಿತಪಡಿಸಿಕೊಳ್ಳತಕ್ಕದ್ದು.
9. ಪ್ರಾಣಿ ಕಲ್ಯಾಣ ಮಂಡಳಿಯು ಪ್ರಸಕ್ತ ವರ್ಷವೂ ಸೇರಿದಂತೆ ಪ್ರತಿ ವರ್ಷ ಗೋಶಾಲೆಗಳಿಗೆ ಶ್ರೇಣಿಗಳನ್ನು ನೀಡುವುದು ಮತ್ತು ಉತ್ತಮ ಶ್ರೇಣಿಯನ್ನು ಹೊಂದಿರುವ ಗೋಶಾಲೆಗಳನ್ನು ಗುರುತಿಸುವುದು ಮತ್ತು ಮೆಚ್ಚುಗೆ ಪುರಸ್ಕಾರವನ್ನು ಪ್ರಾಣಿ ಕಲ್ಯಾಣ ಮಂಡಳಿಯ ವತಿಯಿಂದ ನೀಡುವುದು.
10. ಸರ್ಕಾರದ ವತಿಯಿಂದ ಅಥವಾ ಪ್ರತಿಷ್ಠಿತ ಟ್ರಸ್ಟ್ ಗಳ ವತಿಯಿಂದ ನಡೆಸಲಾಗುವ ಗೋಶಾಲೆಗಳಲ್ಲಿನ ಜಾನುವಾರುಗಳ ನಿರ್ವಹಣಾ ವೆಚ್ಚ ಪ್ರತಿ ಜಾನುವಾರಿಗೆ ಪ್ರತಿ ದಿನಕ್ಕೆ ರೂ.17.30 ಗಳನ್ನು ನಿಗದಿ ಪಡಿಸಲಾಗಿರುತ್ತದೆ. ಒಂದು ವೇಳೆ ಟ್ರಸ್ಟ್ ಆಗಿದ್ದಲ್ಲಿ, ಸದರಿ ಟ್ರಸ್ಟ್ ಕಳೆದ 05 ವರ್ಷಗಳಿಂದ ಕನಿಷ್ಠ 100 ಜಾನುವಾರುಗಳನ್ನು ಹೊಂದಿರುವ ಗೋಶಾಲೆಯನ್ನು ನಡೆಸುತ್ತಿರಬೇಕು.

(ಬಿ.ಎಸ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ.
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಪಶುಸಂಗೋಪನೆ)

## Annexure for G.O. No. E- AHF 65 AHP 2021 Dated:11.08.2021

## GUIDELINES FOR ESTABLISHMENT OF GOSHALAS IN ALL THE DISTRICTS.

1. The responsibility of establishing at least one Goshala in each district rests with the district level SPCA chaired by the Deputy Commissioner of the district. The Goshalas will be established before October 02nd of this year. The first and second installment of funds Rs. 24 Lakhs per district is released to the Deputy Commissioners of the districts for this purpose. Any additional requirement will be provided to the district, upon a resolution to this effect made by the SPCA of the district and sent to the Commissioner of Animal Husbandry and Veterinary Services Department.
2. For the Capital Expenditure involved in the establishment of the Goshala, the Deputy Commissioner shall coordinate with the Zilla Panchayat and other agencies for convergence of the existing programmes like creating bio fencing, cattle shed, agriculture ponds, growing fodder etc. Growing of fodder could be planned in a continuous manner including small trees and shrubs. In case there is any capital expenditure which cannot be met through convergence programme, then such expenditure shall be met with the initial installment of Rs. 24 Lakh.
3. Whether to create a new Goshala or to support or expand any existing Goshalas run by any private trusts in the district is a decision which will be taken by the SPCA. First priority should be given for establishing a new Goshala by the SPCA. However in a rare case, if the SPCA feels that an existing Goshala can be expanded then the SPCA shall record the reason thereof and go ahead with a PPP model.
4. Whether a new Goshala is established or an existing Goshala is expanded, it should be ensured that it can accommodate at least 0.75 percent of the total cattle population in the district. The SPCA shall plan the size of the Goshala accordingly.
5. The Goshala shall be run by the SPCA taking volunteer help, and in such cases where volunteers are not available on a continuous basis, then the SPCA may take the services of manpower on outsource basis as approved by the SPCA in the meeting chaired by the Deputy Commissioner.
6. For sustainability of the Goshalas, the SPCA shall explore ways and means to market the by- products of the Goshala through Khadi gramodyog or KMF or through KAPL (which manufactures pharmaceutical products using the by-products from Goshalas). The SPCA shall also take such steps for sustainable operation of the Goshala, like growing fodder and marketing by-products.

--2

7. In case any volunteers come forward to take care of some of the cattle at their own farm or home it may be allowed by the SPCA after ascertaining and confirming the bonafide reasons thereof.
8. The SPCA shall ensure that the CCTV facilities are made at the Goshala and also daily atleast pictures and daily report about the Goshala is uploaded directly in the weblink provided by the department which will be live from 2nd October 2021 onwards.
9. The Animal Welfare Board will be ranking the Goshalas every year starting from this year and the best ranked Goshalas will be given recognition and appreciatory award every year by the Animal Welfare Board.
10. The expenditure that can be incurred on a cattle will be at the rate of Rs.17.30/cattle/day whether the expenditure is for the ghoshala run by the government or by reputed trusts. In case of trusts, then they should have been running ghoshala with minimum 100 cattle for last 5 years.

(ಬಿ.ಎನ್. ಪ್ರವೀಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಪಶುಸಂಗೋಪನೆ)